**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಕ್ಷೀರಭಾಗ್ಯ/ಟೆಂಡರ್/4682 /2016–17 **ದಿನಾಂಕ: 14.09.2016**

**ಕ್ಷೀರಭಾಗ್ಯ ಯೋಜನೆಯಡಿ ಹಾಲಿನ ಪುಡಿ ಸಾಗಾಣಿಕೆಗೆ ಒಂದು ವರ್ಷದ ಅವಧಿಗೆ ವಾಹನ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡಲು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ವಾಹನ ಒದಗಿಸಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

**ಹಾಲಿನ ಪುಡಿ ಸಾಗಾಣಿಕೆಯ ಮಾರ್ಗಗಳ ವಿವರ :–**

| .ಕ್ರಸಂ | ಮಾರ್ಗಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ | ಶಾಲೆಗಳ ಸಂಖ್ಯೆ (ಅಂದಾಜು) | ಮಾಹೆಯಾನ ಅಂದಾಜು ಹಾಲಿನಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) | ವಾಹನಗಳ ಸಂಖ್ಯೆ (ಕನಿಷ್ಠ 1.5 ಟನ್ ಸಾಮರ್ಥ್ಯ) |
|---|---|---|---|---|---|---|
| 1 | ದಾವಣಗೆರೆ ತಾಲ್ಲೂಕು ಕೇಂದ್ರದಿಂದ ದಾವಣಗೆರೆ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 10000/- | 50,000/- | 473 | 11000 | 1 |
| 2 | ಹರಿಹರ ತಾಲ್ಲೂಕು ಕೇಂದ್ರದಿಂದ ಹರಿಹರ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 10000/- | 50,000/- | 202 | 5000 | 1 |
| 3 | ಚನ್ನಗಿರಿ ತಾಲ್ಲೂಕು ಕೇಂದ್ರದಿಂದ ಚನ್ನಗಿರಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 10000/- | 50,000/- | 355 | 7200 | 1 |
| 4 | ಹರಪನಹಳ್ಳಿ ತಾಲ್ಲೂಕು ಕೇಂದ್ರದಿಂದ ಹರಪನಹಳ್ಳಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 10000/- | 50,000/- | 357 | 8000 | 1 |

ಮೇಲ್ಕಂಡ ಮಾರ್ಗಗಳಿಗೆ ಹಾಲಿನ ಪುಡಿಯನ್ನು ಶಾಲೆಗಳಿಗೆ ಸಾಗಾಣಿಕೆ ಮಾಡಲು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು ವಾಹನಗಳನ್ನು ಹೊಂದಿರುವ ಮಾಲೀಕರು/ ಅರ್ಹ ಗುತ್ತಿಗೆದಾರರು / ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 20–09–2016 ರಿಂದ** |
| 2 | **ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ** | **ದಿನಾಂಕ: 14.10.2016 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **ದಿನಾಂಕ: 17.10.2016 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **ದಿನಾಂಕ: 19.10.2016 ರಂದು ಬೆಳಿಗ್ಗೆ: 11.30 ಗಂಟೆಗೆ** |

**ಷರತ್ತು ಮತ್ತು ನಿಬಂದನೆಗಳು**

1. ಅರ್ಜಿದಾರರು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ದರವನ್ನು ಪ್ರತಿ ಕೆ.ಜಿ ಗೆ ನಮೂದಿಸುವುದು.
2. ಹಾಲಿನ ಪುಡಿಯನ್ನು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮೊತ್ತ ಹಾಗೂ ಅನ್ವಯಿಸುವ ಎಲ್ಲಾ ತೆರಿಗೆಗಳು ಸೇರಿರುತ್ತದೆ.
3. ಹಾಲಿನ ಪುಡಿಯನ್ನು ನಿಗಧಿತ ಸಮಯದಲ್ಲಿ ಸರಬರಾಜು ಮಾಡವುದು ಅತಿ ಮುಖ್ಯವಾಗಿರುತ್ತದೆ ಆದ ಕಾರಣ ತುರ್ತು ಸಂದರ್ಭದಲ್ಲಿ ನಿಗಧಿ ಪಡಿಸಿದ ವಾಹನಗಳ ಸಂಖ್ಯೆಗಿಂತ ಹೆಚ್ಚಿಗೆ ವಾಹನಗಳು ಬೇಕಾಗಿದಲ್ಲಿ ಗುತ್ತಿಗೆದಾರರು ಸ್ವಂತ ವಾಹನದ ಜೊತೆಗೆ ಬಾಡಿಗೆ ವಾಹನವನ್ನು ಒದಗಿಸಬೇಕಾಗಿರುತ್ತದೆ.

ಮುಂದುವರೆದಿದೆ . . . . . . . .

4. ಹಾಲಿನ ಪುಡಿ ಸಾಗಾಣಿಕೆ ವಿಮೆಯನ್ನು ಒಕ್ಕೂಟದಿಂದ ಮಾಡಿಸಲಾಗುವುದು. ಹಾಲಿನ ಪುಡಿ ಸರಬರಾಜುವಿನ ಮುಂಚೆ ವಾಹನದ ವಿವರ(ಸಂಖ್ಯೆ ಮತ್ತು ವಾಹನದ ವಿಧ)ವನ್ನು ವಿಮೆ ಮಾಡಿಸಲು ಅನುಕೂಲವಾಗುವಂತೆ ಕಚೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ವಿಮೆ ಮಾಡಿಸದೆ ಆಗುವ ಅನಾಹುತಗಳಿಗೆ ಅರ್ಜಿದಾರರು ಜವಾಬ್ದಾರರಾಗಿರುತ್ತಾರೆ.
5. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
6. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
7. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನವನ್ನು ಒದಗಿಸುವುದು ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.
8. ಸಾಮಾನ್ಯ ಸಂದರ್ಭಗಳಲ್ಲಿ ಗುತ್ತಿಗೆದಾರರು ಪ್ರಸ್ತುತ ವಾಹನ ಗುತ್ತಿಗೆ ಕರಾರಿನ ಪರಿ ಸಮಾಪ್ತಿಗೊಳಿಸುವಂತಿಲ್ಲ. ವಿಶೇಷ ಸಂದರ್ಭಗಳಲ್ಲಿ ಅಂದರೆ ಗುತ್ತಿಗೆದಾರರು ಮರಣ ಹೊಂದಿದಾಗ ಅಥವಾ ವಾಹನ ಅಪಘಾತಕ್ಕೀಡಾಗಿ ದುರಸ್ಥಿ ಅಸಾದ್ಯವೆಂದಾಗ ಪ್ರಸ್ತುತ ಕರಾರನ್ನು ಪರಿಸಮಾಪಿಗೊಳಿಸುವ ತಮ್ಮ ಇಂಗಿತವನ್ನು 30 ದಿನಗಳ ಸೂಚನೆಯನ್ನು ಕೊಟ್ಟು ಕಚೇರಿಗೆ ತಿಳಿಸತಕ್ಕದ್ದು. ಅಂತಹ ಸೂಚನೆಯನ್ನು ಒಕ್ಕೂಟವು ಪರಿಶೀಲಿಸಿ ಪ್ರತಿಶತ 50 ರವರೆಗೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರಿಕೆಯನ್ನು ರದ್ದುಪಡಿಸಲಾಗುವುದು.
9. ಸೂಚನಾಪತ್ರದಲ್ಲಿ ನಿಗದಿಪಡಿಸಿರುವಂತೆ ಸಕಾಲದಲ್ಲಿ ಗುತ್ತಿಗೆ ಆದೇಶ ಪಡೆದು ಗುತ್ತಿಗೆ ಕಾರ್ಯಗತಗೊಳಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
10. ಅಸಮರ್ಪಕ ಗುತ್ತಿಗೆ ನಿರ್ವಹಣೆ/ವಾಹನ ವಿಳಂಬ/ಕಳ್ಳತನ ಮುಂತಾದ ತಪ್ಪುಗಳಿಗೆ ಕರಾರಿನಲ್ಲಿ ತಿಳಿಸಿರುವಂತೆ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ಗುತ್ತಿಗೆದಾರಿಕೆಯನ್ನು ರದ್ದು ಪಡಿಸಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರುತ್ತಾರೆ.
11. ಯಶಸ್ವಿಯಾದ ಗುತ್ತಿಗೆದಾರರು ಕಡ್ಡಾಯವಾಗಿ ಎರಡು ಭಾವಚಿತ್ರ, ವೃತ್ತಿ ತೆರಿಗೆ ನೋಂದಣಿ ಹಾಗೂ ಆದಾಯ ತೆರಿಗೆ ಪಾನ್ ಕಾರ್ಡ್ ಮಾಡಿಸಿ ಗುತ್ತಿಗೆ ಕೆಲಸದ ಆದೇಶವನ್ನು ಪಡೆಯುವಾಗ ಒಕ್ಕೂಟದಲ್ಲಿ ಗುತ್ತಿಗೆ ಪಡೆದ ಎರಡು ಸಾಕ್ಷಿದಾರರ ಭಾವಚಿತ್ರವನ್ನು ಸಹಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
12. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಸರಕಾರ/ಒಕ್ಕೂಟವು ಹೊರಡಿಸುವ ನಿಯಮಗಳೇನಾದರೂ ಬಂದಲ್ಲಿ ತಮಗು ಅಳವಡಿಸಲಾಗುವುದೆಂದು ತಿಳಿಯತಕ್ಕದ್ದು.
13. ಸಾಗಾಣಿಕೆ ಬಿಲ್ಲನ್ನು ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ ಇವರ ಹೆಸರಿಗೆ ಪಾವತಿ ಕೋರಿ ಸಲ್ಲಿಸುವುದು.
14. ಯಾವುದಾದರೂ ತಂಟೆ ತಕರಾರುಗಳ ಉಂಟಾದಲ್ಲಿ ಸ್ಥಳೀಯ ಶಿವಮೊಗ್ಗ ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥ ಮಾಡಿಕೊಳ್ಳುವುದು. ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಫಾರಂನಲ್ಲಿ ಲಭ್ಯವಿರುತ್ತದೆ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ ಪಡೆಯಬಹುದು. **ದೂರವಾಣಿ : (08182) 246344.**

**www.shimul.coop**

ಸಹಿ/-

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ 14.09.2016
ಸ್ಥಳ : ಶಿವಮೊಗ್ಗ ಡೈರಿ